**DAY & DATE: FRIDAY, JUNE 20th, 2025**

**Matter: Silver Jubilee Celebrations**

**As appeared in the Newspapers:**

**VIJAYA KARNATAKA**
(State, Page No.10)

www.vijaykarnataka.com
www.apps.vijaykarnataka.com
ವಿಜಯ ಕರ್ನಾಟಕ VK

ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಕಿವಿಮಾತು

# ಹೃದಯ ಶ್ರೀಮಂತಿಕೆ ಮುಖ್ಯ



ಬೆಂಗಳೂರಿನ ಬಿಎನ್‌ಎಂಐಟಿ ಕಾಲೇಜಿನ ರಜತ ಮಹೋತ್ಸವದಲ್ಲಿ ಸ್ಮರಣ ಸಂಚಿಕೆಯನ್ನು ಹರಿಹರಪುರದ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಬಿಡುಗಡೆ ಮಾಡಿದರು.

■ **ವಿಕ ಸುದ್ದಿಲೋಕ** ಬೆಂಗಳೂರು

ಆಸ್ತಿ ಗಳಿಸಿ ಶ್ರೀಮಂತರಾದರೆ ಪ್ರಯೋಜನವಿಲ್ಲ. ಹೃದಯ ಶ್ರೀಮಂತಿಕೆ ಇರಬೇಕು. ಮಾನವೀಯತೆ ಎಲ್ಲಕ್ಕಿಂತ ದೊಡ್ಡದು ಎಂದು ಹರಿಹರಪುರದ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನರಸಿಂಹ ಪೀಠದ ಪೀಠಾಧಿಪತಿ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಅವರು ನಗರದ ಬಿಎನ್‌ಎಂಐಟಿ ಕಾಲೇಜಿನ ರಜತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ''ನಾವು ಸದಾ ಸಕಾರಾತ್ಮಕವಾಗಿರಬೇಕು. ಬೇರೆ ಜನರಿಗೆ ಒಳ್ಳೆಯದನ್ನೇ ಬಯಸಬೇಕು. ಪ್ರಕೃತಿಗೆ ವಿರುದ್ಧವಾಗಿ ನಡೆಯಬಾರದು. ಪ್ರಕೃತಿ ನಮಗೆ ಎಲ್ಲವನ್ನೂ ನೀಡಿದೆ. ಅದನ್ನು ಉಳಿಸುವ, ಬೆಳೆಸುವ ಕೆಲಸ ನಮ್ಮಿಂದ ಆಗಬೇಕು. ಮನುಷ್ಯರು ಮೊದಲು ತಮ್ಮ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಬೇಕು. ಇದರಲ್ಲಿ ನೀವು ಯಶಸ್ಸು ಕಂಡರೆ, ಜೀವನದಲ್ಲಿ ಯಶಸ್ಸು ಕಂಡಂತೆ,'' ಎಂದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿದ್ಯಾಶಂಕರ್ ಮಾತನಾಡಿ, ''ಈ ಸಂಸ್ಥೆಯಿಂದ ಕಳೆದ 25 ವರ್ಷದಲ್ಲಿ 8 ಸಾವಿರ ವಿದ್ಯಾರ್ಥಿಗಳು ಪದವಿ ಪಡೆದು ಹೋಗಿದ್ದಾರೆ. ಸಂಸ್ಥೆಯ ಪ್ರತಿಯೊಬ್ಬ ನೌಕರನಾಗಿ ಕೆಲಸ ಮಾಡಿದಾಗ ಇದರ ಅಭಿವೃದ್ಧಿ ಸಾಧ್ಯ,'' ಎಂದರು.

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ''ಒಂದು ಸಂಸ್ಥೆಯನ್ನು ಕಟ್ಟುವುದು ಬಹಳ ಕಷ್ಟ, ಅನಂತರ ಅದನ್ನು ಉಳಿಸಿಕೊಳ್ಳುವುದು ಮತ್ತು ಬೆಳೆಸುವುದು ಇನ್ನೂ ಕಷ್ಟ, ಇಂದು ಈ ವಿದ್ಯಾ ಸಂಸ್ಥೆ ಹೆಮ್ಮರವಾಗಿ ಬೆಳೆದು ನಿಂತಿದೆ. ಲಕ್ಷಾಂತರ ವಿದ್ಯಾರ್ಥಿಗಳಿಗೆ ಭವಿಷ್ಯ ರೂಪಿಸಿದೆ,'' ಎಂದು ಹೇಳಿದರು.

''ನಮ್ಮ ಕಾಲೇಜಿಗೆ ರಾಷ್ಟ್ರಪತಿಯಾಗಿದ್ದ ಎ.ಪಿ.ಜೆ. ಅಬ್ದುಲ್ ಕಲಾಂ ಕೂಡ ಬಂದಿದ್ದರು. ಬಡ ಪ್ರತಿಭಾವಂತರಿಗೆ ವಿದ್ಯಾರ್ಥಿ ವೇತನ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡುತ್ತಿದ್ದೇವೆ,'' ಎಂದು ಬಿಎನ್‌ಎಂ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ನಾರಾಯಣರಾವ್ ಆರ್.ಮಾನೆ ಹೇಳಿದರು.

ಬಿಎನ್‌ಎಂಐಟಿ ಉಪಾಧ್ಯಕ್ಷ ಅಶೋಕ್ ಆರ್.ಮಾನೆ, ಉಪ ನಿರ್ದೇಶಕ ಡಾ. ಜಿ.ಎನ್.ಕೃಷ್ಣಮೂರ್ತಿ, ಡೀನ್ ಈಶ್ವರ್ ಎನ್. ಮಾನೆ ಉಪಸ್ಥಿತರಿದ್ದರು.